ದೇಗುಲವನ್ನು ನವೀಕರಿಸಿ ತಾನು ಅದರ ಮೊಕ್ತೇಸರನಾದ. ಪೂಜೆಗೆ ಅರ್ಚಕರನ್ನು ಸಂಬಳ ಕೊಟ್ಟು ತರಿಸಿಕೊಂಡ.

'ಪಾಪವಾದರೂ ಪುಣ್ಯವಾದರೂ ಅದು ಪೂಜೆ ಮಾಡಿದವರಿಗೆ' ಅಂತ ಅಪ್ಪಯ್ಯನ ವಾದ. ತಾನು ಮಾತ್ರ ದೇವಸ್ಥಾನಕ್ಕೆ ರಾಜ ಕೊಟ್ಟಿದ್ದ ಉಂಬಳಿಯ ಜಮ್ಮಾ ಭೂಮಿಯನ್ನು ಕಾಫಿ ತೋಟ ಮಾಡಿದ. ಕರಿಮೆಣಸು ಏಲಕ್ಕಿ ಬೆಳೆಸಿದ. ಹೆಂಡತಿಯನ್ನು ಕಾಣದ ಹಾಗೆ ಮಾಯ ಮಾಡಿದ ಅವನಿಗೆ ಯಾವ ಪಶ್ಚಾತ್ತಾಪವೂ ಇರಲಿಲ್ಲ. ಮಡಿಕೇರಿ ಪೇಟೆಯಲ್ಲಿ ಆಸ್ತಿ ಮಾಡಿದ. ರಾಜಾ ಸೀಟು ಗುಡ್ಡದ ಮೇಲೆ ಸಸ್ಯಾಹಾರಿ ಹೋಟೆಲು ಮಾಡಿದ.

ಇನ್ನು ನಾನು ಆ ಅಪ್ಪನ ಮಗ. ನಾಮರ್ದ. ಅಪ್ಪನೊಡನೆ ಮೊದಲಿನಿಂದಲೂ ಕಾದಾಟವೇ, ಅಮ್ಮನನ್ನು ಕಾಣೆಯಾಗಿಸಿದವನು ಅಂತ. ಅಪ್ಪನೂ ಬೇಡ, ದೇವರೂ ಬೇಡ, ತೋಟವೂ ಬೇಡ, ಹೋಟೆಲೂ ಬೇಡ, ಯಾವ ಕೊಂಡಾಟವೂ ಬೇಡ ಅಂತ ಕಾಲೇಜು ಕಲಿಯಲು ವಾರಣಾಸಿಗೆ ಹೋದೆ. ಸಾಹಿತ್ಯ ಓದಿದೆ. ಚಾರುದತ್ತ ಅಂತ ಹೆಸರು ಬದಲಿಸಿಕೊಂಡೆ. ಅದಕ್ಕೆ ದೊಡ್ಡ ಕಾರಣವೇನಿಲ್ಲ. ಹೆಂಗಸಾಗಿದ್ದರೆ ವಸಂತಸೇನಾ ಅಂತ ಇಟ್ಟುಕೊಳ್ಳುತ್ತಿದ್ದೆ. ಗಂಡಸು, ಅದಕ್ಕೆ ಚಾರುದತ್ತ. ಹೆಸರು ಬದಲಾದಾಗ ನಾನು ಬದಲಾಗಿದ್ದೆ. ಆದರೆ, ಅಪ್ಪ ಹಾಗೇ ಇದ್ದ. ಅದೇ ಧಿಮಾಕು, ಅದೇ ವಹಿವಾಟು.

'ತೋಟದ ಸಹವಾಸ ನಿನಗೆ ಬೇಡ, ಹೋಟೆಲನ್ನು ನೋಡಿಕೋ. ಮದುವೆಯೂ ಮಾಡಿಕೋ' ಅಂದ.

ನನಗೆ ಸಿಟ್ಟು ಬಂತು. 'ಹೋಟೆಲೂ ಬೇಡ, ಸುಡುಗಾಡು ಸಾಹಿತ್ಯವೂ ಬೇಡ' ಅಂತ ಮತ್ತೆ ಉತ್ತರಕ್ಕೆ ಹೋದೆ. ಸೈನಿಕರ ಶಾಲೆಯಲ್ಲಿ ಇಂಗ್ಲಿಷು ಕಲಿಸುವ ಕೆಲಸ.

